# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 633
2. ಮಾನ್ಯ ಸದಸ್ಯರ ಹೆಸರು : ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 21.02.2023
4. ಉತ್ತರಿಸುವ ಸಚಿವರು : ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ಅನುಮತಿ ನೀಡುವಾಗ ಆ ಕಾರ್ಖಾನೆಗಾಗಿ ಕಬ್ಬು ಪೂರೈಸಲು, ನಿರ್ದಿಷ್ಟ ಜಮೀನುಗಳನ್ನು ಕ್ರೂಢೀಕರಿಸಿ, ನಿರ್ದಿಷ್ಟ ಪ್ರದೇಶವನ್ನೇನಾದರೂ ಸರ್ಕಾರ ನಿಗದಿ ಮಾಡಿ ಅನುಮತಿ ನೀಡುವುದೆ; | ಸರ್ಕಾರದ ಆದೇಶ ಸಂಖ್ಯೆ: ಸಿಐ 187 ಎಸ್‌ಜಿಎಫ್ 2007, ದಿನಾಂಕ:11.09.2007 ರಲ್ಲಿ ಕರ್ನಾಟಕ ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಒಂದು ಸಕ್ಕರೆ ಕಾರ್ಖಾನೆಯಿಂದ ಮತ್ತೊಂದು ಸಕ್ಕರೆ ಕಾರ್ಖಾನೆಗೆ ಕನಿಷ್ಟ 15 ಕಿ.ಮೀ. ಅಂತರವನ್ನು ನಿಗದಿಪಡಿಸಲಾಗಿರುತ್ತದೆ.<br><br>ಕಬ್ಬು (ನಿಯಂತ್ರಣ) ಆದೇಶ 1966 ಮತ್ತು ಕಾಲಕಾಲಕ್ಕೆ ಹೊರಡಿಸಿದ ತಿದ್ದುಪಡಿಗಳಲ್ಲಿನ ಮಾರ್ಗಸೂಚಿಗಳನ್ನು ಅನುಸರಿಸಿ, ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 45 ಎಸ್‌ಜಿಎಫ್ 2022, ದಿನಾಂಕ:22.03.2022ರಲ್ಲಿ ನಿಯಮಿಸಿರುವಂತೆ ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ರಾಜ್ಯ ಸರ್ಕಾರದಿಂದ ಅಂತರ ಪ್ರಮಾಣ ಪತ್ರವನ್ನು ನೀಡಲಾಗುತ್ತಿದೆ. ಸದರಿ ಅಂತರ ಪ್ರಮಾಣ ಪತ್ರದಲ್ಲಿನ ಶಿಫಾರಸ್ಸನ್ನು ಆಧರಿಸಿ, ಹೊಸ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಕೇಂದ್ರ ಸರ್ಕಾರದಿಂದ Industrial Entrepreneur Memorandum (ಐ.ಇ.ಎಂ) ನೀಡಲಾಗುತ್ತದೆ.<br><br>ಉದ್ದೇಶಿತ ಸಕ್ಕರೆ ಕಾರ್ಖಾನೆಗೆ ಕೇಂದ್ರ ಸರ್ಕಾರದಿಂದ ಐ.ಇ.ಎಂ. ಪಡೆದ ನಂತರ ಹಾಗೂ ರಾಜ್ಯ ಉನ್ನತ ಮಟ್ಟದ ಏಕಗವಾಕ್ಷಿ ತೆರವು ಸಮಿತಿಯಿಂದ (SLSWCC)ಯಿಂದ ಅನುಮೋದನೆಗೊಂಡ ನಂತರ ಕಬ್ಬು ಮೀಸಲು ಕ್ಷೇತ್ರ ಹಂಚಿಕೆ ಕೋರಿ ಸಂಬಂಧಿಸಿದ ಸಂಸ್ಥೆ / ಕಂಪನಿಯು ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುತ್ತದೆ.<br><br>ಕಬ್ಬು ಮೀಸಲು ಕ್ಷೇತ್ರವನ್ನು ಹಂಚಿಕೆ ಮಾಡುವಾಗ, ಉದ್ದೇಶಿತ ಸಕ್ಕರೆ ಕಾರ್ಖಾನೆಯ 7.5 ಕಿ.ಮೀ. ವ್ಯಾಪ್ತಿಯಲ್ಲಿ ಬರುವ ಗ್ರಾಮಗಳನ್ನು ಕಬ್ಬು ಮೀಸಲು ಕ್ಷೇತ್ರದ ವ್ಯಾಪ್ತಿಗೆ ಒಳಪಡಿಸಲಾಗುತ್ತದೆ. |

| | | |
|---|---|---|
| | | ಕಬ್ಬು ಮೀಸಲು ಕ್ಷೇತ್ರ ಹಂಚಿಕೆ ಮಾಡುವ ಪೂರ್ವದಲ್ಲಿ ಈ ಗ್ರಾಮಗಳಲ್ಲಿ ದೊರೆಯಬಹುದಾದ ಕಬ್ಬಿನ ಲಭ್ಯತೆಯ ಬಗ್ಗೆ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರಿಂದ ವರದಿ ಪಡೆಯಲಾಗುತ್ತದೆ. ನಂತರ ಕಾರ್ಖಾನೆಯ ಸುತ್ತಮುತ್ತಲಿನ ಇತರೆ ಕಾರ್ಖಾನೆಗಳ ಜತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಜಂಟಿ ಸಭೆ ನಡೆಸಲಾಗುತ್ತದೆ. ಆ ಕಾರ್ಖಾನೆಗಳ ಅಭಿಪ್ರಾಯ ಪಡೆದು ಸರ್ಕಾರದ ಆದೇಶ ಸಂಖ್ಯೆ: ಸಿಐ 187 ಎಸ್ ಜಿಎಫ್ 2007, ದಿನಾಂಕ:11.09.2007ರಲ್ಲಿನ ಮಾರ್ಗಸೂಚಿಗಳನ್ವಯ ಹೊಸ ಸಕ್ಕರೆ ಕಾರ್ಖಾನೆಗೆ ಕಬ್ಬು ಮೀಸಲು ಕ್ಷೇತ್ರವನ್ನು ಹಂಚಿಕೆ ಮಾಡಲಾಗುತ್ತದೆ.<br><br>ಉದ್ದೇಶಿತ ಕಾರ್ಖಾನೆಗೆ ಕಬ್ಬು ಮೀಸಲು ಕ್ಷೇತ್ರವನ್ನು ತಾತ್ಕಾಲಿಕವಾಗಿ ಹಂಚಿಕೆ ಮಾಡಿ ಆದೇಶ ಹೊರಡಿಸಲಾಗುವುದು. ಈ ರೀತಿ ಹಂಚಿಕೆಯಾಗುವ ಕಬ್ಬು ಮೀಸಲು ಕ್ಷೇತ್ರದ ವ್ಯಾಪ್ತಿಯಲ್ಲಿ ಕಬ್ಬು ಬೆಳೆಯುವ ರೈತರೊಂದಿಗೆ ಕಾರ್ಖಾನೆಯು ಒಂದು ವರ್ಷ ಮುಂಚಿತವಾಗಿ ಅಂದರೆ, ಕಬ್ಬು ನಾಟಿ ಮಾಡುವ ಸಮಯದಲ್ಲಿ ದ್ವಿಪಕ್ಷೀಯ ಒಪ್ಪಂದ ಮಾಡಿಕೊಂಡು ರೈತರು ಬೆಳೆದ ಕಬ್ಬನ್ನು ಸಕಾಲಕ್ಕೆ ಅರೆಯಬೇಕಾಗಿರುತ್ತದೆ. ಈ ಸಂಬಂಧ ಎಲ್ಲಾ ಕಾರ್ಖಾನೆಗಳಿಗೆ ಸೂಚನೆಗಳನ್ನು ನೀಡಲಾಗುತ್ತದೆ. |
| (ಆ) | ಹಾಗಿದ್ದಲ್ಲಿ, ಸರ್ಕಾರದ ಅನುಮತಿಯ ಷರತ್ತುಗಳು ಮತ್ತು ಆ ಕಾರ್ಖಾನೆಯ ಮಾಲೀಕರನ್ನು ನಂಬಿ ಕಬ್ಬು ನಾಟಿ ಮಾಡುವ ರೈತನ 12 ತಿಂಗಳ ಅವಧಿಯ ಕಟಾವಿಗೆ ಬಂದ ಕಬ್ಬನ್ನು ಆದ್ಯತೆಯ ಮೇರೆಗೆ ಪ್ರಥಮದಲ್ಲಿ ಕಟಾವು ಮಾಡಿಕೊಂಡು ಹೋಗಲೇಬೇಕೆನ್ನುವ ಷರತ್ತುಗಳನ್ನು ಹಾಕಲಾಗಿದೆಯೇ; | ದ್ವಿಪಕ್ಷೀಯ ಒಪ್ಪಂದದನ್ವಯ ಕಾರ್ಖಾನೆಗಳು ನಿಗದಿತ ಅವಧಿಯಲ್ಲಿ ರೈತರ ಕಬ್ಬನ್ನು ಕಟಾವು ಮಾಡುವುದಕ್ಕೆ ಮತ್ತು ಕಬ್ಬು ಬೆಳೆಗಾರರು ಸಕ್ಕರೆ ಕಾರ್ಖಾನೆಗೆ ಕಬ್ಬನ್ನು ಪೂರೈಸುವ ಷರತ್ತುಗಳಿಗೆ ಕಾರ್ಖಾನೆ ಹಾಗೂ ಕಬ್ಬು ಬೆಳೆಗಾರರು ಬದ್ಧರಾಗಿರಬೇಕಾಗುತ್ತದೆ. ಈ ಒಪ್ಪಂದದಲ್ಲಿ ಕಾರ್ಖಾನೆಗಳು 12 ತಿಂಗಳ ಅವಧಿಯಲ್ಲಿಯೇ ಕಬ್ಬು ಕಟಾವು ಮಾಡಬೇಕೆಂಬ ನಿಯಮವನ್ನು ಅಳವಡಿಸಿರುವುದಿಲ್ಲ. ಸಾಮಾನ್ಯವಾಗಿ ನಾಟಿ ಮಾಡಿದ ದಿನದಿಂದ 12-14 ತಿಂಗಳ ಅವಧಿಗೆ ಕಬ್ಬನ್ನು ಕಟಾವು ಮಾಡಬೇಕಾಗಿರುತ್ತದೆ. ಪಕ್ವವಲ್ಲದ ಮತ್ತು ವಿಳಂಬವಾಗಿ ಕಬ್ಬನ್ನು ಕಟಾವು ಮಾಡಿ ನುರಿಸುವುದರಿಂದ ಇಳುವರಿಯಲ್ಲಿ ನಷ್ಟ ಉಂಟಾಗಲಿದೆ. ಇದರಿಂದಾಗಿ ಕಾರ್ಖಾನೆ ಮತ್ತು ರೈತರಿಗೆ ಇಬ್ಬರಿಗೂ ಸಹ ಆರ್ಥಿಕ ನಷ್ಟ ಉಂಟಾಗಲಿದೆ. ಕಬ್ಬು ಮೀಸಲು ಕ್ಷೇತ್ರದಲ್ಲಿ ನೋಂದಾಯಿತ ಕಬ್ಬನ್ನು - ಕಾರ್ಖಾನೆಯವರು ಕಡ್ಡಾಯವಾಗಿ ನುರಿಸಲೇಬೇಕಾಗಿರುತ್ತದೆ. |

| | | |
|---|---|---|
| (ಇ) | ಸಮಯಕ್ಕೆ ಸರಿಯಾಗಿ ಕಬ್ಬು ಕಟಾವು ಆಗದಿದ್ದಲ್ಲಿ, ಕಬ್ಬಿನ ತೂಕದಲ್ಲಿ ಕಡಿಮೆ ಆಗಿ ರೈತರಿಗೆ ನಷ್ಟವಾಗುವ ಸಂಭವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? | **ಬಂದಿರುವುದಿಲ್ಲ.** ಕಬ್ಬು ಪಕ್ವವಾದ ನಂತರ ಕಬ್ಬಿನ ಕಟಾವು ವಿಳಂಬವಾದರೆ ಸಕ್ಕರೆ ಗುಣಮಟ್ಟ ಹಾಗೂ ಕಬ್ಬಿನ ತೂಕದಲ್ಲಿ ವ್ಯತ್ಯಾಸವಾಗುತ್ತದೆ. ಇದರಿಂದ ರೈತರಿಗೂ ಹಾಗೂ ಸಕ್ಕರೆ ಕಾರ್ಖಾನೆಗಳಿಗೂ ಹಾನಿಯಾಗುತ್ತದೆ. ಒಂದು ವೇಳೆ ಸಕ್ಕರೆ ಕಾರ್ಖಾನೆಗಳು ದ್ವಿಪಕ್ಷೀಯ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ರೈತರು ಸಲ್ಲಿಸುವ ದೂರಿನ ಮೇರೆಗೆ ಅಂತಹ ಸಕ್ಕರೆ ಕಾರ್ಖಾನೆಗಳ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ಸಿಐ 30 ಎಸ್‌ಜಿಎಫ್ 2023

(ಶಂಕರ.ಬ.ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು